ಮನೆ ಅವಳದ್ದು. ಹಣ ಸಂದಾಯ ಮಾಡಿ, ವಿಚ್ಛೇದನ ಕಾಗದಪತ್ರಕ್ಕೆ ಇಬ್ಬರ ಸಮ್ಮತಿ ಸಿಗ್ನೇಚರು ಬಿದ್ದಮೇಲೆ ನಾನು ಬೇರೆಕಡೆ ಹೋಗತೇನೆ, ಕಂಡಿಶನ್ ಪ್ರಕಾರ' ತೋಟ, ಬಂಗಾರ ಎಲ್ಲ ಅಡವಿಡೊ ಪ್ರಸಂಗದಿಂದ ಬೇಸರದಲ್ಲಿದ್ದವರಿಗೆ ಸಿಟ್ಟೇರಿ ಕಂಡಿಶನಂತೆ ಕಂಡೀಶನ್ನು! ಇವನ ಕಂಡೀಶನ್ನು ಸರಿಯಿಲ್ಲ ಅನ್ನೋ ಬೈಗುಳ ಮನಸಲ್ಲೇ ದಬ್ಬಲ್ಪಟ್ಟು ಕರಗಿತು. ರಾತ್ರಿ ಮಲಗಿದವರಿಗೆ ಕೋಣೆಯಲ್ಲಿಡುಗಿದ ಗುಡ್ ನೈಟ್ ವಾಸನೆಗೋ ಅಥವ ಮನಃಸ್ಥಿತಿಗೋ ಬೇಗ ನಿದ್ದೆಹತ್ತಲಿಲ್ಲ. ಎಂಟುದಿನ ಹಿಂದೆ ಅಮೆರಿಕಾದಿಂದ ಬಂದ ಜಗನ್ನಾಥ ತಮ್ಮಮನೆಗೆ ಬಂದದ್ದು ನೆನಪಾಯಿತು. ತವರಿನ ಒಬ್ಬನೇ ತಮ್ಮ ಅಪರೂಪಕ್ಕೆ ಬಂದು ಇವಳು ತತ್ಕಾಲಕ್ಕೆ ಎಲ್ಲ ಮರೆತು ಈ ಕಡೆಯ ತಿಂಡಿತೀರ್ಥ ಮಾಡುವ ಸಂಭ್ರಮದಲ್ಲಿದ್ದುದಕ್ಕೆ ತನಗೆ ಸಣ್ಣ ಸಾಂತ್ವನ ಸಿಕ್ಕಿದ್ದು ಹೌದು. ಒಂದು ಮೂರುಸಂಜೆ ಸುಮಂತನ ವಿಷಯ ಹೇಳಿ ಸಂಕಟ ತೋಡಿಕೊಂಡಿದ್ದಳು. ಅಮೆರಿಕದಲ್ಲೆ ಎಷ್ಟೋ ವರ್ಷದಿಂದ ನೆಲೆಸಿದವ ಆತ. 'ಅಕ್ಕ, ಇದ್ಯಾವ ಚಿಂತೆ ವಿಷಯ? ಮನಸು ಹೊಂದಾಣಿಕೆ ಕಳಕೊಂಡಮೇಲೆ ಬೇರೆಯಾಗ್ಲಿ ಬಿಡು. ಅಮೆರಿಕದಲ್ಲಿ ಇದಕ್ಕೆ ಯಾರೂ ತಲೇನೆ ಕೆಡಿಸಿಕೊಳ್ಳೋದಿಲ್ಲ!' ಅಂದುಬಿಟ್ಟ. ಅಷ್ಟು ಹಗುರವಾಗಿ ತೆಗೆದುಕೊಂಡಿದ್ದಕ್ಕೆ ಅವಳಿಗೆ ಸಮಾಧಾನವಾಗದಿದ್ದರು ಚರ್ಚೆ ಮುಂದುವರಿಸಲಿಲ್ಲ. ಜಗನ್ನಾಥ ಇನ್ನೂ ಒಂದು ಸಂಗತಿ ಪ್ರಸ್ತಾಪಿಸಿದ್ದ. ನಂದಳ್ಳಿಯಲ್ಲಿದ್ದ ಅವನ ಪಿತ್ರಾರ್ಜಿತ ನಾಲ್ಕೆಕರೆ ಅಡಕೆ ತೋಟದ ಉಸ್ತುವಾರಿಯನ್ನು ತಾನೇ ಆಗಾಗ ಹೋಗಿ ನೋಡಿಕೊಂಡು ಫಲಗುತ್ತಿಗೆ ಕೊಟ್ಟು ಆ ಹಣವನ್ನು ಅವನ ಖಾತೆಗೆ ಹಾಕುತ್ತಾ ಬಂದಿದ್ದರು. ಅಲ್ಲೆ ಸಂಸಾರ ಹೂಡಿದ ಆತನಿಗೆ ಮರಳಿ ಬರುವ ವಿಚಾರವಿಲ್ಲದ್ದಕ್ಕೆ ಆಸ್ತಿಯನ್ನು ಸರಿಯಾದ ಬೆಲೆ ಸಿಕ್ಕರೆ ಮಾರಿಬಿಡುವ ಪ್ರಸ್ತಾಪವಿಟ್ಟಿದ್ದ. ತಾನೆ ಆಗ ಹಿರೇರು ಮಾಡಿದ ಆಸ್ತಿ ಮಾರೋದು ಯಾಕೆ? ವರ್ಷ ವರ್ಷ ಉತ್ಪನ್ನ ಬರುತ್ತದಲ್ಲ ಅಂತ ಹೇಳಿದ್ದು ನೆನಪಾಯ್ತು. ಜಗನ್ನಾಥನಿಂದ ಅಪೇಕ್ಷಿಸಲಾಗುವುದಿಲ್ಲವಾದರೂ ಕೊಂಡವರ ಹತ್ತಿರ ಅಷ್ಟಿಷ್ಟು ಕಮಿಶನ್ ತಗೋಬಹುದು. ಒಂದು ಹೋಗಲಿ, ಅರ್ಧ ಪರ್ಸೆಂಟೇ ಅಂದರೂ ಇವತ್ತಿನ ಮಾನದಲ್ಲಿ ಸುಮಾರಾಯಿತು. ಈ ಇಕ್ಕಟ್ಟಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಒಳಪ್ರಜ್ಞೆಯಲ್ಲೆಲ್ಲೊ ಅಡಗಿದ್ದ ಈ ಪ್ರಲೋಭನೆವೇ ರೈಲಿನಲ್ಲಿ ತೋಟದ ಪ್ರಸ್ತಾಪ ಮಾಡಿಸಿರಬಹುದೇ ಎಂಬ ವಿಚಾರ ಮೂಡಿ ದಿಗಿಲಾಯಿತು. ಇದಿಷ್ಟೇ ಅಲ್ಲ. ಈಗ, ತಿಂಗಳ ಹಿಂದೆ, ದುರಾಲೋಚನೆ ಮೂಡಿ, ಎಲ್ಲಿ ಸಾಕ್ಷಿ ತೋರಿಸು ಅಂತ ಸವಾಲು ಹಾಕಿ, ಅವಳೇನಾದರು ಹಮ್ಮಿನಿಂದ ಚೆಡ್ಡಿ ಮುಖಕ್ಕೆ ಹಿಡಿದರೆ ಅದನ್ನ ಕಸಿದುಕೊಂಡು ಬಂದು ನಾಶಮಾಡಬೇಕಂತ ಹುನ್ನಾರು ಮಾಡಿ ಹೋದವರನ್ನು ಏನೂ ಗೊತ್ತಿಲ್ಲದವಳಂತೆ ನಗುತ್ತ ಬರಮಾಡಿಕೊಂಡು, ಆಮೇಲೆ ಅವಳೇ ಎಳೆದುಕೊಂಡು, ತಾನು ಮತ್ತೆ ಸೋತು, ಈಗ ಬೇಕಾದಷ್ಟು ಸಾಕ್ಷ್ಯವನ್ನು ಕೊಟ್ಟು ಬಂದದ್ದು ನೆನಪಾಗಿ ತಾನಿಂಥ ಕಚ್ಚೆಹರುಕ ಅಂದಮೇಲೆ ಅನುಭವಿಸಬೇಕು ಅಂತ ಉಗ್ರ ಕೋಪ ಬರುತ್ತದೆ. ಹೌದು, ಕೊಂಡವರ ಹತ್ತಿರ ಕಮಿಷನ್ ತಗೊಂಡರೆ ತಪ್ಪಲ್ಲ ಅನಿಸತೊಡಗಿ, ಜಗನ್ನಾಥ ಅಮೆರಿಕಕ್ಕೆ ಹೋಗಲು ಇನ್ನು ನಾಲ್ಕು ದಿನವಿದೆ ಅನ್ನುವ ಲೆಕ್ಕ ಸಿಕ್ಕಿ, ತಾನು ನಾಳೆ ಊರಿಗೆ ಹೋಗಿಬಿಡಬೇಕು ಅಂತ ನಿರ್ಧರಿಸಿದರು.

★★★

ಆಗಲೆ ಆಸ್ತಿ ಮಾರುವ ವಿಚಾರ ಮಾಡಿದ್ದ ಜಗನ್ನಾಥ, ಭಾವನಾಗಿಯೇ 'ಈಗೇನೋ ಜನ ಆಸ್ತಿ ಖರೀದಿಸೋಕೆ ಆಸಕ್ತಿ ತೋರಿಸ್ತಾ ಇದಾರಪ್ಪ... ನಿನ್ನ ವಿಚಾರವೇ ಸರಿಯೇನೋ ಅನಿಸ್ತಾ ಇದೆ...' ಅಂತ ಅಭಿಪ್ರಾಯ ಮಂಡಿಸಿದಾಗ ಗಟ್ಟಿ ಮಾಡಿದ. ಆದರೆ ಸಮಯ ಜಾಸ್ತಿಯಿರಲಿಲ್ಲ. ಪದೇಪದೇ ಅಮೆರಿಕದಿಂದ ಬರಲಾಗುವುದಿಲ್ಲ. ಹೆಗಡೆಯವರೇ ಸೂಚಿಸಿದ್ದಕ್ಕೆ ನಿರಾಳವೆನ್ನಿಸಿ ಒಪ್ಪಿದ.